## ಗೋಟಾಸ್ಕ್

ಐಪ್ಯಾಡ್‌ನ ಈ ಉಚಿತ ಆ್ಯಪ್ ನೀವು ಮಾಡಬೇಕಾದ ಕೆಲಸಗಳನ್ನು ವಿವಿಧ ಪ್ರಾಜೆಕ್ಟ್ ಅಥವಾ ಪಟ್ಟಿಯಲ್ಲಿ ಸೇರಿಸುತ್ತದೆ. ಅವುಗಳಿಗೆ ವಿವಿಧ ಬಣ್ಣಗಳನ್ನು ಕೊಡಬಹುದು. ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿದ ಮೇಲೆ ಗೂಗ್ಲ್ ಅಕೌಂಟ್ ಜೊತೆ ಸೇರಿಸಬೇಕು. ಹೊಸ ಹೊಸ ಟಾಸ್ಕ್ ಸೇರಿಸಿದ ಕೂಡಲೇ ಅವುಗಳಿಗೆ ಡೆಡ್‌ಲೈನ್ ಹಾಗೂ ಅಲರ್ಟ್ ನಿಗದಿಪಡಿಸಿ. ಇದು ಆಫ್‌ಲೈನ್‌ನಲ್ಲಿ ಕೆಲಸ ಮಾಡುತ್ತದೆ.




## ಸ್ಪಾಟಿಫೈ

ಸಂಗೀತ ಕ್ಷೇತ್ರದಲ್ಲಿ ಹೆಚ್ಚು ಶ್ರೋತೃಗಳನ್ನು ಸೆಳೆಯುತ್ತಿರುವ ಆ್ಯಂಡ್ರಾಯ್ಡ್ ಮತ್ತು ಐಒಎಸ್‌ನ ಉಚಿತ ಆ್ಯಪ್. ಜಾಹೀರಾತು ಇಲ್ಲದ ಸಂಗೀತ, ಬೇರೆ ಬೇರೆ ವಿಭಾಗಗಳಿಗೆ ಬದಲಾಯಿಸುವ ಆಯ್ಕೆ ಬೇಕಿದ್ದರೆ ಶುಲ್ಕ ನೀಡಬೇಕಾಗುತ್ತದೆ. 15 ದಶಲಕ್ಷಕ್ಕೂ ಅಧಿಕ ಹಾಡುಗಳ ಆಯ್ಕೆ ನಿಮ್ಮ ಮುಂದಿದೆ. ನಿಮ್ಮದೇ ಆದ ಪ್ಲೇಲಿಸ್ಟ್‌ಗೆ ಬೇರೆ ಸದಸ್ಯರಿಂದ ಶಿಫಾರಸ್ಸನ್ನೂ ಪಡೆಯಬಹುದು. ರಾಕ್, ಡಿಕೇಡ್, ಅರ್ಬನ್, ಪಾಪ್ ಮೊದಲಾದ ವಿಭಾಗಗಳಿವೆ. ವಿಡಿಯೋ ಗೇಮ್ ಆಧಾರಿತ ಸ್ಟೇಶನ್‌ಗಳೂ ಲಭ್ಯ.







## ಪಾಕೆಟ್

ನ್ಯೂಸ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವ ಲೇಖನಗಳನ್ನು ತಕ್ಷಣ ಓದಲು ಸಮಯವಿಲ್ಲದಿದ್ದರೆ ಚಿಂತೆ ಬೇಡ. ವೆಬ್‌ಸೈಟ್ ಕ್ಲೋಸ್ ಮಾಡಿದರೆ ಮತ್ತೆ ಆ ಲೇಖನ ಸಿಗುವುದೋ ಇಲ್ಲವೋ ಎಂಬ ಅನುಮಾನವೂ ಬೇಡ. ಈ ಪಾಕೆಟ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಬೇಕಾದ ಲೇಖನಗಳನ್ನು ಸೇರಿಸಿ. ನಿಮಗೆ ಸಮಯವಿದ್ದಾಗ ಓದಬಹುದು.



## ವಾಸ್ಕೊ ಕ್ಯಾಮ್

ಆಂಡ್ರಾಯ್ಡ್‌ನ ಈ ಆ್ಯಪ್ ಅಂದವಾಗಿ ವಿನ್ಯಾಸ ಮಾಡಲಾಗಿರುವ ಫೋಟೊ ಆ್ಯಪ್. ವೃತ್ತಿಪರ ಫೋಟೊ ಫಿಲ್ಟರ್ ಸಾಫ್ಟ್‌ವೇರ್‌ನಂತೆ ಕೆಲಸ ಮಾಡುತ್ತದೆ. ಅದರಲ್ಲೂ ಫಿಲ್ಮ್ ಫೋಟೊ ತರಹ. ಇದು ಅದ್ಭುತ ಫೋಟೊ ಸೆರೆ ಹಿಡಿಯುವ ಹಾಗೂ ನಂತರದ ಎಡಿಟ್ ಮಾಡುವ ಟೂಲ್ ಹೊಂದಿದೆ. ನಿಮ್ಮ ಫೋಟೊಗಳಿಗೆ ಅಂದವಾದ ವೆಬ್ ಗ್ಯಾಲರಿ ಕೂಡಾ ಈ ಆ್ಯಪ್‌ನಲ್ಲಿ ಲಭ್ಯ. ಫ್ರಂಟ್ ಮತ್ತು ಬ್ಯಾಕ್ ಕ್ಯಾಮೆರಾಗಳಿಗೆ ಸುಲಭವಾಗಿ ಬದಲಾಯಿಸಬಹುದು. ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

■ ಎಸ್. ತುಂಬೆ